# ಜುಕರ್‌ಬರ್ಗ್ ಪದಚ್ಯುತಿ



ಫೇಸ್‌ಬುಕ್ ಸ್ಥಾಪಕ, ಸಿಇಓ ಮಾರ್ಕ್ ಜುಕರ್‌ಬರ್ಗ್ ಪದಚ್ಯುತಿ ಯತ್ನಗಳು ಮತ್ತೆ ಜೀವ ತಳೆದಿವೆ. ಫೇಸ್‌ಬುಕ್ ಕಂಪನಿಯ ಆಡಳಿತ ಮಂಡಳಿಯ ಮುಖ್ಯಸ್ಥನ ಹುದ್ದೆಯಿಂದ ಜುಕರ್‌ಬರ್ಗ್‌ನನ್ನು ಕೆಳಗಿಳಿಸಬೇಕೆಂದು ಕೋರಿ ಫೇಸ್‌ಬುಕ್‌ನ ಹಲವು ಹೂಡಿಕೆದಾರರು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಕಮಿಶನ್(ಎಸ್‌ಇಸಿ)ಗೆ ಹೊಸ ಪ್ರಸ್ತಾಪ ಸಲ್ಲಿಸಿದ್ದಾರೆ. 'ಫೇಸ್‌ಬುಕ್‌ನ ನಿರ್ದೇಶಕ ಮಂಡಳಿಯ ಚೇರ್‌ಮನ್ ಆಗಿ ಜೂಕರ್‌ಬರ್ಗ್ ಆಡಳಿತ ಹಗರಣಗಳಿಂದ ಕೂಡಿದೆ. ಇದರಿಂದ ಕಂಪನಿಯ ರಿಸ್ಕ್ ಹೆಚ್ಚುತ್ತಿದೆ, ಷೇರುದಾರರಿಗೆ ಆರ್ಥಿಕ ನಷ್ಟವಾಗುತ್ತಿದೆ' ಎನ್ನುವುದು ಈ ಹೊಸ ಅರ್ಜಿಯ ಸಾರ. ಅದಕ್ಕೆ ತಕ್ಕಂತೆ, ಕಳೆದ ಒಂದು ವಾರದಿಂದ ಷೇರು ಮಾರುಕಟ್ಟೆಯಲ್ಲಿ ಫೇಸ್‌ಬುಕ್ ಮೌಲ್ಯ ಇಳಿಮುಖವಾಗುತ್ತಿದೆ. ಮೇ 30ರಂದು ನಡೆಯಲಿರುವ ಆಡಳಿತ ಮಂಡಳಿಯ ಸಭೆಯಲ್ಲಿ ಜುಕರ್‌ಬರ್ಗ್‌ನ 'ಅಧಿಕಾರ ನಿಯಂತ್ರಣ'ಕ್ಕೆ ನಿರ್ದೇಶಕರ ಸಮ್ಮತಿ ಸಿಗುತ್ತದೆಯೇ ಎನ್ನುವುದೀಗ ಕುತೂಹಲದ ಸಂಗತಿ.

ಕಂಪನಿಯನ್ನು ಸ್ಥಾಪಿಸಿದವರೇ ಆಡಳಿತ ಮಂಡಳಿಯಿಂದ ಪದಚ್ಯುತಗೊಳ್ಳುವುದು ಇತ್ತೀಚೆಗೆ ಹೆಚ್ಚಾಗುತ್ತಿದೆ. ಜೆಟ್ ಏರ್‌ವೇಸ್‌ನ ಸ್ಥಾಪಕ ನರೇಶ್ ಗೋಯಲ್ ರಾಜೀನಾಮೆ ಕೊಟ್ಟದ್ದು ಕಣ್ಣಮುಂದೆಯೇ ಇದೆ. ಅದಕ್ಕಿಂತ ದೊಡ್ಡ ಪ್ರಕರಣ ಉಬರ್ ಕಂಪನಿಯ ಸ್ಥಾಪಕ, ಸಿಇಓ ಟ್ರಾವಿಸ್ ಕಲನಿಕ್‌ನ ಪದತ್ಯಾಗ. ಷೇರುದಾರರು ಸಿಟ್ಟಿಗೆದ್ದರೆ ಸ್ಥಾಪಕ ಚೇರ್‌ಮನ್ ಕೂಡಾ ಸ್ಥಾನ ಉಳಿಸಿಕೊಳ್ಳುವುದು ಕಷ್ಟ. ಆದರೆ ಫೇಸ್‌ಬುಕ್ ಪ್ರಕರಣದಲ್ಲಿ ಜುಕರ್‌ಬರ್ಗ್‌ನನ್ನು ನಿರ್ದೇಶಕ ಮಂಡಳಿಯಿಂದ ಹೊರಕ್ಕೆ ತಳ್ಳುವುದು ಅಷ್ಟು ಸುಲಭವಿಲ್ಲ. 2017ರಲ್ಲಿ ಅಂತಹದ್ದೊಂದು ಪ್ರಯತ್ನ ನಡೆದರೂ ಯಶಸ್ವಿಯಾಗಿಲ್ಲ. ಅದಕ್ಕೆ ಕಾರಣ ಕಂಪನಿಯ ಶೇಕಡಾ 53.3ರಷ್ಟು ಷೇರುಗಳು ಜುಕರ್‌ಬರ್ಗ್ ಕೈಯಲ್ಲೇ ಇರುವುದು. ಅದರಲ್ಲೂ ಮತದಾನ ಮೌಲ್ಯ ಹೆಚ್ಚಿರುವ ಷೇರುಗಳ ಹಿನ್ನೆಲೆಯಲ್ಲಿ ಅಂದಾಜು ಶೇಕಡಾ 60ರಷ್ಟು ಷೇರುಮೌಲ್ಯ ಆತನದ್ದಾಗಿದೆ. ಅಕಸ್ಮಾತ್ ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಕಮಿಶನ್ ಈ ನಿಟ್ಟಿನಲ್ಲಿ ಸಮ್ಮತಿ ನೀಡಿದರೂ, ತನ್ನಲ್ಲಿರುವ ಷೇರುಗಳ ಮತದಾನ ಹಕ್ಕಿನ ಹಿನ್ನೆಲೆಯಲ್ಲಿ ಜುಕರ್‌ಬರ್ಗ್ ತನ್ನ ಸ್ಥಾನ ಉಳಿಸಿಕೊಳ್ಳಬಹುದು. ನಿರ್ದೇಶಕ ಮಂಡಳಿಯವರು ಸ್ವತಂತ್ರ ನಿರ್ದೇಶಕರೊಬ್ಬರನ್ನು ಚೇರ್‌ಮನ್ ಮಾಡಬೇಕೆಂದು ನಿರ್ಧರಿಸಿದರೆ, ಷೇರುದಾರರ ಸಭೆಯ ಮೊರೆಹೋಗಿ ಜುಕರ್‌ಬರ್ಗ್ ಅದನ್ನು ತಡೆಯಬಹುದು. ಅಥವಾ ತನ್ನವರನ್ನು ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸಬಹುದು. ಹೀಗೆ ಸ್ವತಂತ್ರ ನಿರ್ದೇಶಕರು ಮಂಡಳಿಗೆ ಬಂದರೆ ಚೇರ್‌ಮನ್ ಯಾರಾಗಬೇಕು ಎನ್ನುವುದನ್ನು ಜುಕರ್‌ಬರ್ಗ್ ನಿರ್ಧರಿಸಬಹುದು. ಆದರೆ ಕಮಿಷನ್ ಈ ವಿಷಯದಲ್ಲಿ ಮೂಗು ತೂರಿಸುವ ಸಂಭವ ಇಲ್ಲ ಎನ್ನಲಾಗುತ್ತಿದೆ. ಏನಿದ್ದರೂ ಒತ್ತಡಕ್ಕೆ ಮಣಿದು ಜುಕರ್‌ಬರ್ಗ್ ತಾನೇ ರಾಜೀನಾಮೆ ನೀಡಬೇಕು.

ಕಾಲೇಜು ದಿನಗಳಲ್ಲೇ ಫೇಸ್‌ಬುಕ್‌ಅನ್ನು ಸ್ಥಾಪಿಸಿದ ಮಾರ್ಕ್‌ಗೀಗ 34ರ ಹರೆಯ. ಕಂಪನಿಯ ಒಳಗೆ ಒತ್ತಡಗಳು ಎಷ್ಟಿವೆಯೆಂದರೆ, ಮಾರ್ಕ್ ತಾನೇ ರಾಜೀನಾಮೆ ಕೊಡಲು ನಿರ್ಧರಿಸುವುದು ಒಳ್ಳೆಯದು ಎನ್ನುವ ಅಭಿಪ್ರಾಯವಿದೆ. ಇತ್ತೀಚಿನ ಹಗರಣಗಳಿಂದ ಫೇಸ್‌ಬುಕ್‌ನ ವಿಶ್ವಾಸಾರ್ಹತೆ ಕಡಿಮೆ ಆಗಿದೆ. ಫೇಸ್‌ಬುಕ್‌ನಲ್ಲಿ ತಪ್ಪುಮಾಹಿತಿಗಳ ಪ್ರಸಾರ ಮತ್ತು ಬಳಕೆದಾರರ ಖಾಸಗಿ ಹಕ್ಕುಗಳಿಗೆ ಧಕ್ಕೆ ತರುವ ಸಂಗತಿಗಳ ಕುರಿತು ವ್ಯಾಪಕ ಚರ್ಚೆ ನಡೆಯುತ್ತಿದೆ. ಕೇಂಬ್ರಿಡ್ಜ್ ಅನಾಲಿಟಿಕಾ ಹಗರಣದಲ್ಲಿ ಶಾಸನಸಭೆಯ ತನಿಖೆಯನ್ನೂ ಮಾರ್ಕ್ ಎದುರಿಸಬೇಕಾಯಿತು. ಲಾಭ ಕುಸಿತ, ಹೊಸ ಆ್ಯಪ್‌ಗಳ ಮಾರುಕಟ್ಟೆ ಅಸ್ಥಿರತೆ, ವಿಶ್ವಾಸಾರ್ಹತೆಯ ಪ್ರಶ್ನೆ, ಆಡಳಿತ ಮಂಡಳಿಯ ನಿರ್ದೇಶಕರ ಅಸಮಾಧಾನ– ಹೀಗೆ ಮಾರ್ಕ್ ಎದುರಿಸುತ್ತಿರುವ ಒತ್ತಡಗಳು ಒಂದೆರಡಲ್ಲ.

ಕಳೆದ ಎರಡು ವರ್ಷಗಳಲ್ಲಿ ಕಂಪನಿಯಲ್ಲಿ ಹಲವು ವಿಭಾಗಗಳ ಮುಖ್ಯಸ್ಥರು ಕೆಲಸ ಬಿಟ್ಟು ಹೋಗಿದ್ದಾರೆ. ಕಳೆದ ವಾರ ಚೀಫ್ ಪ್ರಾಡಕ್ಟ್ ಆಫೀಸರ್ ಕ್ರಿಸ್ ಕಾಕ್ಸ್ ಮತ್ತು ವಾಟ್ಸ್‌ಆ್ಯಪ್ ಉಪಾಧ್ಯಕ್ಷ ಕ್ರಿಸ್ ಡೇನಿಯಲ್ಸ್ ಕೆಲಸ ಬಿಡುವುದು ಪ್ರಕಟವಾಗಿದೆ. ಫೇಸ್‌ಬುಕ್ ಆರಂಭವಾದ ದಿನಗಳಲ್ಲಿ ಸೇರಿದ 15 ಎಂಜಿನಿಯರ್‌ಗಳಲ್ಲಿ ಕ್ರಿಸ್ ಕಾಕ್ಸ್ ಕೂಡಾ ಒಬ್ಬ. ನ್ಯೂಸ್‌ಫೀಡ್ ಸಹಿತ ಕಂಪನಿಯ ಹಲವು ಉತ್ಪನ್ನಗಳು ಮತ್ತು ಮೊಬೈಲ್ ಆ್ಯಪ್‌ಗಳ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿದಾತ. ಡೇನಿಯಲ್ಸ್ ಕಳೆದ ವರ್ಷದ ಮೇ ತಿಂಗಳಿಂದ ವಾಟ್ಸ್‌ಆ್ಯಪ್‌ನ ಮುಖ್ಯಸ್ಥ. ಕಳೆದ ವರ್ಷ ಜುಕರ್‌ಬರ್ಗ್‌ನ ಕೆಲಸದ ವಿಧಾನದ ಬಗ್ಗೆ ಭಿನ್ನಮತ ವ್ಯಕ್ತಪಡಿಸಿ ವಾಟ್ಸ್‌ಆ್ಯಪ್‌ನ ಸಹಸಂಶೋಧಕ ಜಾನ್ ಕೋಅಮ್ ಹುದ್ದೆ ತ್ಯಜಿಸಿದ ಬಳಿಕ, ಡೇನಿಯಲ್ಸ್ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ.

ತನ್ನ ಚೇರ್‌ಮನ್ ಹುದ್ದೆಗೆ ಕುತ್ತು ಬಂದಿರುವುದು ಮಾರ್ಕ್‌ಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಕಂಪನಿಯ ವಿಶ್ವಾಸಾರ್ಹತೆಯನ್ನು ಮರಳಿ ಗಳಿಸಿ, ಮಾರುಕಟ್ಟೆಯಲ್ಲಿ ಸ್ಥಿರತೆ ತರಲು ಆತನೂ ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದ್ದಾನೆ. ಇತ್ತೀಚೆಗೆ ಮಾಧ್ಯಮ ಸ್ವಾತಂತ್ರ್ಯ ಮತ್ತು ಜವಾಬ್ದಾರಿಗಳ ಕುರಿತ ವಿಚಾರಗಳನ್ನು ಹಂಚಿಕೊಳ್ಳುವ ಪೋಡ್‌ಕಾಸ್ಟ್ ಶುರು ಮಾಡಿದ್ದಾನೆ. ಈ ಡಿಜಿಟಲ್ ವಿಡಿಯೊಗಳನ್ನು ಡೌನ್‌ಲೋಡ್ ಮಾಡಿಕೊಂಡು ನೋಡುವ ಮೂಲಕ ಫೇಸ್‌ಬುಕ್ ಬಳಕೆದಾರರ ನಿಯಮಗಳ ತಿಳಿವಳಿಕೆ ಮತ್ತು ಔಚಿತ್ಯಪ್ರಜ್ಞೆ ಹೆಚ್ಚಲಿದೆ ಎನ್ನುವುದು ಜುಕರ್‌ಬರ್ಗ್ ಅನಿಸಿಕೆ. ಈ ಎಲ್ಲ ಹೊಯ್ದಾಟದ ಮಧ್ಯೆ ಮಾರುಕಟ್ಟೆಯಲ್ಲಿ ಫೇಸ್‌ಬುಕ್ ಮೌಲ್ಯ ಕುಸಿಯುತ್ತಿರುವುದು ಕಂಪನಿಗೆ ಸಂಬಂಧಿಸಿದ ಎಲ್ಲರಿಗೂ ಆತಂಕ ತಂದಿರುವ ಸಂಗತಿ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65